ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 07–01–2019**

# ಪತ್ರಿಕಾ ಆಮಂತ್ರಣ

1. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ–ಸಮಗ್ರ ಕೃಷಿ ಅಭಿವೃದ್ಧಿ: ರಾಜ್ಯಮಟ್ಟದ ಕಾರ್ಯಗಾರ:

ಅಧ್ಯಕ್ಷತೆ:
ಎನ್.ಹೆಚ್.ಶಿವಶಂಕರ ರೆಡ್ಡಿ, ಕೃಷಿ ಸಚಿವ.

ದಿನಾಂಕ: 08–01–2019, ಮಂಗಳವಾರ, ಸಮಯ: ಬೆಳಿಗ್ಗೆ 9:30 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 419, ವಿಕಾಸಸೌಧ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

**ಸಂಖ್ಯೆ: 29/29**

## ಜನವರಿ 23 ರಿಂದ 31ರ ವರೆಗೆ ಯಶವಂತಪುರದ ಸಾರಿಗೆ ಕಚೇರಿಯಲ್ಲಿ ಹೊಸ ನೋಂದಣಿ ಹಾಗೂ ಇ–ಪಾವತಿ ಕಾರ್ಯ ಸ್ಥಗಿತ

**ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)**

ಯಶವಂತಪುರದ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಅಧಿಕಾರಿಗಳ ಕಚೇರಿಯ ಎಲ್ಲಾ ಸೇವೆಗಳನ್ನು ಆನ್‌ಲೈನ್ ಮುಖಾಂತರ ಜಾರಿಗೊಳಿಸಲು “ವಾಹನ್–4” ತಂತ್ರಾಂಶವನ್ನು

ಅಳವಡಿಸುವ ಪ್ರಕ್ರಿಯೆ ನಡೆಸಲಾಗುತ್ತಿರುವ ಕಾರಣಕ್ಕಾಗಿ ಜನವರಿ 23ರಿಂದ ಹೊಸ ನೋಂದಣಿ ಹಾಗೂ ಇ-ಪಾವತಿಯನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಲಾಗುವುದು.

ಈ ಹಿನ್ನೆಲೆಯಲ್ಲಿ ಜನವರಿ 24 – 28 ರವರೆಗೆ ಕಚೇರಿಯ ಖಜಾನೆ ವಿಭಾಗದ ಕಾರ್ಯವನ್ನು ಸ್ಥಗಿತಗೊಳಿಸಲಾಗಿದ್ದು, ಜನವರಿ 29 ರಿಂದ ಹೊಸ ವಾಹನಗಳ ನೋಂದಣಿಗೆ ವಾಹನ್-4 ತಂತ್ರಾಂಶದಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಫೆಬ್ರವರಿ 1 ರಿಂದ ವಾಹನ್ 4 ನಲ್ಲಿ ಉಳಿದ ವಾಹನಗಳಿಗೆ ಸಂಬಂಧಿಸಿದ ಇತರೆ ಕೆಲಸ ಕಾರ್ಯಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಸಾರ್ವಜನಿಕರು, ಮಾಲೀಕರು ಈ ಕಚೇರಿಗೆ ಅರ್ಹತಾ ಪತ್ರ ನವೀಕರಣ, ನೋಂದಣಿ ಪತ್ರ ನವೀಕರಣ, ವಾಹನ ಮಾಲೀಕತ್ವ ವರ್ಗಾವಣೆ, ರಹದಾರಿ ಇನ್ನಿತರೆ ಕೆಲಸ ಕಾರ್ಯಗಳಿಗೆ ಅರ್ಜಿ ಸಲ್ಲಿಸಿದ್ದು, ಬಾಕಿಯಿದ್ದ ಪ್ರಕರಣಗಳನ್ನು ಖುದ್ದಾಗಿ ಕಚೇರಿಗೆ ಹಾಜರಾಗಿ ಅಗತ್ಯ ದಾಖಲಾತಿಗಳೊಂದಿಗೆ ಜನವರಿ 22 ರೊಳಗೆ ಪೂರೈಸಿಕೊಳ್ಳಬೇಕು.

ಜನವರಿ 23 ರಿಂದ 31 ರವರೆಗೆ ಸದರಿ ಕಚೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಲಾಗುವುದು. ಫೆಬ್ರವರಿ 1 ರಿಂದ ವಾಹನ್-4 ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 30/30**

## ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು(ಕೇಂದ್ರ) ಕಚೇರಿ ಕಾರ್ಯ ವ್ಯತ್ಯಯ

**ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)**

ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿ ಇಲಾಖೆಯವರ ತಾಂತ್ರಿಕ ನೆರವಿನಿಂದ ಅಭಿವೃದ್ಧಿಗೊಳಿಸಿರುವ ವಾಹನಗಳ ನೋಂದಣಿ ಸೇವೆಗಳ ಸಂಬಂಧಿಸಿದ ಕೇಂದ್ರೀಕೃತ ಹಾಗೂ ವೆಬ್ ಆಧಾರಿತ ವಾಹನ್ -4 ತಂತ್ರಾಂಶವನ್ನು ರಾಜ್ಯ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು(ಕೇಂದ್ರ) ಇಲ್ಲಿ ದಿನಾಂಕ 25-01-2019 ರಂದು ಪ್ರಾರಂಭಿಸಲು ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಅವರು ತೀರ್ಮಾನಿಸಿರುತ್ತಾರೆ.

ವಾಹನ್ -4ರಲ್ಲಿ ಮೋಟಾರು ವಾಹನಗಳ ವಿವಿಧ ಕಾರ್ಯಗಳಿಗಾಗಿ (ಮೋಟಾರು ವಾಹನಗಳ ಹೊಸ ನೋಂದಣಿ, ವಾಹನದ ವರ್ಗಾವಣೆ, ವಿಳಾಸ ಬದಲಾವಣೆ, ಕಂತು ಕರಾರು ನಮೂದು/ರದ್ದತಿ,

ಎಫ್.ಸಿ. ನೋಂದಣಿ ಪತ್ರ ನವೀಕರಣ, ಸಿ.ಸಿ. ಎನ್.ಓ.ಸಿ. ವಾಹನ ಸಂಖ್ಯೆ ಮರು ನೋಂದಣಿ, ನಕಲು ನೋಂದಣಿ, ರಹದಾರಿ ನೀಡುವಿಕೆ/ನವೀಕರಣ/ನಕಲು ರಹದಾರಿ ನೀಡುವಿಕೆ ಇತ್ಯಾದಿ) ಈಗಾಗಲೇ ಅರ್ಜಿಗಳನ್ನು ಈ ಕಚೇರಿಗೆ ಸಲ್ಲಿಸಿದ್ದಲ್ಲಿ ಮತ್ತು ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಯಾವುದೇ ಕೆಲಸ ಕಾರ್ಯಗಳು ಆಗಬೇಕಾಗಿದ್ದಲ್ಲಿ ದಿನಾಂಕ 17-01-2019 ರೊಳಗೆ ಅರ್ಜಿ ಸಲ್ಲಿಸಿ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳತಕ್ಕದ್ದೆಂದು ಸಾರ್ವಜನಿಕರಿಗೆ ತಿಳಿಸಲಾಗಿದೆ.

ಆನ್‌ಲೈನ್ ಮೂಲಕ ವಾಹನ ನೋಂದಣಿಗೆ ಅರ್ಜಿ ಸಲ್ಲಿಸುವಿಕೆ ಹಾಗೂ ಇ-ಪಾವತಿಯನ್ನು ದಿನಾಂಕ 16-01-2019 ರಿಂದ ಸ್ಥಗಿತಗೊಳಿಸಲಾಗುವುದು. ತದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಮತ್ತು ಈಗಾಗಲೇ ಶುಲ್ಕ, ತೆರಿಗೆ, ಇತ್ಯಾದಿ ಪಾವತಿಸಿದಲ್ಲಿ ಅಂತಹವುಗಳನ್ನು ಕೂಡ ನಿಗದಿತ ಅವಧಿಯೊಳಗೆ ಕಚೇರಿಯ ಕರ್ತವ್ಯದ ವೇಳೆಯಲ್ಲಿ ಬಾಕಿ ಅರ್ಜಿಗಳನ್ನು ವಿಲೇಗೊಳಿಸುತ್ತಿರುವುದಿಂದ ಸಾರ್ವಜನಿಕರು ಯಾವುದಾದರೂ ಬಾಕಿ ಕೆಲಸಗಳಿದ್ದಲ್ಲಿ ಕಚೇರಿಗೆ ಹಾಜರಾಗಿ ಪೂರೈಸಿಕೊಳ್ಳಲು ವಿನಂತಿಸಲಾಗಿದೆ. ಹಾಗೂ ದಿನಾಂಕ 25-01-2019 ರಿಂದ ಹಿಂದಿನ ಅರ್ಜಿಗಳನ್ನು ಹೊಸ ತಂತ್ರಾಂಶವು ಮಾನ್ಯ ಮಾಡದೇ ಇರುವುದರಿಂದ ಈ ಕಚೇರಿಯು ಜವಾಬ್ದಾರಿಯಾಗಿರುವುದಿಲ್ಲ ಎಂದು ಸಾರ್ವಜನಿಕರಿಗೆ ತಿಳಿಸಲಾಗಿದೆ.

ಈ ಕಚೇರಿಯಲ್ಲಿ ದಿನಾಂಕ 18-01-2019 ರಿಂದ 24-01-2019 ರವರೆಗೆ ವಾಹನ್ -1ರ ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಲಾಗುವುದು ಹಾಗೂ ಆ ದಿನಗಳಂದು ಖಜಾನೆ ವಿಭಾಗದಲ್ಲಿ ಯಾವುದೇ ಶುಲ್ಕ/ತೆರಿಗೆ ಸ್ವೀಕರಿಸಲಾಗುವುದಿಲ್ಲ, ಆದುದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅಡಚಣೆಯುಂಟಾದಲ್ಲಿ ಸಾರ್ವಜನಿಕರು ಸಹಕರಿಸಬೇಕಾಗಿ ಮತ್ತು ವಾಹನ್ -4 ತಂತ್ರಾಂಶವನ್ನು ಅಳವಡಿಸಲು ಸಹಕರಿಸುವಂತೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಬೆಂಗಳೂರು (ಕೇಂದ್ರ) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 31/31**

# ಶೇಕಡಾ 50 ರ ರಿಯಾಯಿತಿಯಲ್ಲಿ ಪುಸ್ತಕಗಳ ಮಾರಾಟ

**ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)**

ಗಣರಾಜ್ಯೋತ್ಸವ ಅಂಗವಾಗಿ 2019 ರ ಜನವರಿ ಮಾಹೆಯಲ್ಲಿ ಮಾತ್ರ ತಿಂಗಳು ಪೂರ್ತಿ ಪ್ರಾಧಿಕಾರದ ಎಲ್ಲ ಪುಸ್ತಕಗಳನ್ನು ಶೇಕಡಾ 50 ರ ರಿಯಾಯಿತಿಯಲ್ಲಿ ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಜಿಲ್ಲೆಯ ಸಹಾಯಕ ನಿರ್ದೇಶಕರ ಕಚೇರಿತಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರಿದ ತೆರೆಯಲಾದ ಎಲ್ಲಾ ಜಿಲ್ಲಾವಾರು

ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್‌ನಲ್ಲಿ ಮಾರಾಟಕ್ಕೆ ಲಭ್ಯವಿದೆ.

ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕಾರದ್ದು, ಈ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕಗಳನ್ನು ಅಂತರ್ಜಾಲದಲ್ಲಿಯೂ ಕೂಡ ಶೇಕಾ 50% ರಿಯಾಯಿತಿ ಅಂದರೆ **www.kannadapustakapradhikara.com** ದಲ್ಲಿ ಪುಸ್ತಕಗಳು ವಿಭಾಗದಲ್ಲಿ ಆಯ್ಕೆ ಮಾಡಿ ಆನ್ ಲೈನ್ ಮೂಲಕ ಹಣ ಪಾವತಿಸಿ ಪುಸ್ತಕಗಳನ್ನು ಅಂಚೆ ಮೂಲಕ ಪಡೆಯಬಹುದಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಈವರೆಗೆ ಪ್ರಕಟಿಸುತ್ತಿದೆ. ಇವುಗಳಲ್ಲಿ ವ್ಯಕ್ತಿ ಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ ಜಾನಪದ, ಪರಿಸರ, ಕೃಷಿ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಸುಮಾರು 360 ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 32/32**

## ಅಂತಾರಾಷ್ಟ್ರೀಯ ಖಗೋಳ ಸಂಸ್ಥೆಯ ವತಿಯಿಂದ ಖಗೋಳ ಉತ್ಸವ –100 ವರ್ಷಗಳು ಕಾರ್ಯಕ್ರಮ

**ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)**

ಜವಾಹರಲಾಲ್ ನೆಹರು ತಾರಾಲಯದಲ್ಲಿ ಅಂತಾರಾಷ್ಟ್ರೀಯ ಖಗೋಳ ಸಂಸ್ಥೆಯ ವತಿಯಿಂದ ಖಗೋಳ ಉತ್ಸವ –100 ವರ್ಷಗಳು ಕುರಿತು ಕಾರ್ಯಕ್ರಮವನ್ನು ಜನವರಿ 10 ರಿಂದ 13, 2019 ರವರೆಗೆ ಆಯೋಜಿಸಿದೆ. ಹೆಚ್ಚಿನ ವಿವರಗಳಿಗೆ 080–22379725, 22266084, 22203234 ಇ ಮೇಲ್ info@taralaya.org ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 33/33**

## Installation e-Vahan-4" software at RTO Koramangala:

Bengaluru, **January 7 (Karnataka Information)**

**Pursuant to the directions of the Commissioner Transport and Road Safety; the office of the Deputy Commissioner for Transport and Sr. Regional Transport Officer, Bangalore (Central) Koramangala has initiated to undertake the work of installation of Centralized and Web-based " e-Vahan-4" software in association with the Road Transport and Highway Department, New Delhi from 18-01-2019 to 24-01-2019.**

**For, the general public who have already submitted their applications relating to Motor Vehicle Registration and allied services and who intend to submit fresh application for the purpose, are requested to get completed their official work done within 17-01-2019 during office hours without fail. Subsequent to that the new software will not entertain/allow the pending work.**

**Further it is also informed the work/services pertaining to the registration of the vehicle and allied services along with payment or remittance of tax and free remain closed from 18-01-2019 to 24-01-2019 for the installation work. So the general public who intend to seek the registration of motor vehicles and allied services are hereby requested to bear with us and to co-operate from 18-01-2019 to 24-01-2019 till the implementation/completion of "e-Vahan-4 work says official press release.**

**ಸಂಖ್ಯೆ: 34/34**

## ಎಸಿಬಿ ದಾಳಿ

<u>ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)</u>

ಕೋಲಾರ ಜಿಲ್ಲೆಯ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ಯಲಿವಳ್ಳಿ ಗ್ರಾಮದ ನಿವಾಸಿಯೊಬ್ಬರಿಗೆ ನರೇಗಾ ಯೋಜನೆಯಡಿಯಲ್ಲಿ ಕೈಗೊಂಡಿದ್ದ ಕಾಮಗಾರಿ ಬಿಲ್ ಮೊತ್ತ ರೂ.79,000/- ಮಂಜೂರು ಮಾಡಲು ಕೋರಿರುತ್ತಾರೆ. ಶ್ರೀ. ನಾರಾಯಣಸ್ವಾಮಿ ಪಿ.ಡಿ.ಒ, ಬನಹಳ್ಳಿ ಗ್ರಾಮ ಪಂಚಾಯಿತಿ ರವರು ರೂ.3,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:07/01/2019 ರಂದು ರೂ.2,500/- ಲಂಚದ ಹಣವನ್ನು ಫಿರ್ಯಾದುದಾರರಿಂದ ಪಡೆದುಕೊಳ್ಳುವ ಸಂದರ್ಭದಲ್ಲಿ ಕೋಲಾರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 35/35**

# ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮೂಂದೂಡಿಕೆ

ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)

ಕನ್ನಡ ಪುಸ್ತಕ ಪ್ರಾಧಿಕಾರ ಜನವರಿ 9 ರಂದು ಬೆಳಿಗ್ಗೆ 11-00 ಗಂಟೆಗೆ ನಯನ ರಂಗಮಂದಿರ, ಕನ್ನಡ ಭವನ. ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ನಡೆಯಬೇಕಿದ್ದ -2017 ನೇ ಸಾಲಿನ ವಿವಿಧ ಪ್ರಶಸ್ತಿ ಹಾಗೂ ಬಹುಮಾನಗಳ ಪ್ರದಾನ ಕಾರ್ಯಕ್ರಮವನ್ನು ಮೂಂದೂಡಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 36/36**

# ಫೆಬ್ರವರಿ 4 ರಿಂದ 12 ರವರೆಗೆ ಅರೇಬಿಕ್ ಪರೀಕ್ಷೆ

ಬೆಂಗಳೂರು, ಜನವರಿ 7, (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿವತಿಯಿಂದ ಅರೇಬಿಕ್ ಪರೀಕ್ಷೆಗಳಾದ ಉಸ್ತಾನಿಯಾ, ಫೌಕಾನಿಯ, ಆಫ್ಜಲ್ ಉಲ್ ಉಲ್ಮಾ-ಮಧ್ಯಮ, ಅಫ್ಜಲ್ ಉಲ್-ಉಲ್ಮಾ

ಉತ್ತಮ ಪರೀಕ್ಷೆಗಳು ದಿನಾಂಕ: 04-02-2019 ರಿಂದ 12-02-2019 ರವರೆಗೆ ರಾಜ್ಯದ 31 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.

ಇದಕ್ಕೆ ಸಂಬಂಧಿಸಿದ ಗೌಪ್ಯ/ಲೇಖನ ಸಾಮಗ್ರಿಗಳು, ಸುತ್ತೋಲೆಗಳು ಇತ್ಯಾದಿಗಳನ್ನು ಆಯಾ ಜಿಲ್ಲಾ ಡಯಟ್‌ಗಳಿಗೆ ಕಳುಹಿಸಲಾಗಿರುತ್ತದೆ. ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಅಭಿರಕ್ಷಕರುಗಳು ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ಸಂಪರ್ಕಿಸಿ ಮಾಹಿತಿ ಪಡೆಯುವುದು. ಪ್ರವೇಶ ಪತ್ರಗಳನ್ನು ಸಂಬಂಧಿಸಿದ ಅರೇಬಿಕ್ ಶಾಲೆಗಳಿಗೆ ಕಳುಹಿಸಲಾಗಿದ್ದು, ವಿದ್ಯಾರ್ಥಿಗಳು ಶಾಲೆಗಳಿಂದ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08023360109, 23311146 (ಫ್ಯಾಕ್ಸ್) ಅಥವಾ ಇ-ಮೇಲ್ dpioekseeb@gmail.com ಮೂಲಕ ವೀಕ್ಷಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.